## 1990-91 ಮತ್ತು 1991-92 ನೇ ಸಾಲಿನ ಉತ್ಪಾದನೆಯಾದ ಕಾಕಂಬಿಯ ಪ್ರಮಾಣ.

368 (626) ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗಿ):- ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) 1990-91 ಮತ್ತು 1991-92ನೇ ಸಾಲಿನಲ್ಲಿ ಉತ್ಪಾದನೆಯಾದ ಕಾಕಂಬಿಯ ಪ್ರಮಾಣವೆಷ್ಟು?

ಆ) ರಾಜ್ಯದಲ್ಲಿ ಉಪಯೋಗಿಸಿಕೊಂಡ, ಹೊರ ರಾಜ್ಯಗಳಿಗೆ ಮತ್ತು ಹೊರದೇಶಗಳಿಗೆ ರಫ್ತು ಮಾಡಿದ ಕಾಕಂಬಿಯ ಪ್ರಮಾಣವೆಷ್ಟು?

ಇ) ರಾಜ್ಯದಲ್ಲಿ ಉತ್ಪಾದನೆಯಾಗುವ ಕಾಯನ್ನು ಉಪಯೋಗಿಸುವ ಪೂರ್ಣ ಸಾಮರ್ಥ್ಯವು ರಾಜ್ಯದಲ್ಲಿರುವ ಡಿಸ್ಟಿಲ್ಲರಿಗಳಿಗೆ ಇದೆಯೇ?

ಈ) ಇಲ್ಲದಿದ್ದಲ್ಲಿ, ರಾಜ್ಯದಲ್ಲಿರುವ ಡಿಸ್ಟಿಲ್ಲರಿಗಳಿಗೆ ಬೇಕಾಗುವ ಹಾಗೂ ಹೊರ ರಾಜ್ಯಗಳಿಗೆ ಕಳುಹಿಸುವ ಕಾಕಂಬಿಯ ಪ್ರಮಾಣವೆಷ್ಟು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು):-

ಲಕ್ಷ ಮೆಟ್ರಿಕ್ ಟನ್‌ಗಳಲ್ಲಿ

ಅ) 90-91 : 3.88 (ಡಿಸೆಂಬರ್ 90 ರಿಂದ ನವೆಂಬರ್ 91)

91-92 : 0.61 (ಡಿಸೆಂಬರ್ 91 ಒಂದು ತಿಂಗಳು ಮಾತ್ರ)

(ಸೂಚನೆ: ಕೇಂದ್ರಿಯ ಕಾಕಂಬಿ ವರ್ಷ ಡಿಸೆಂಬರ್ ನಿಂದ ನವೆಂಬರ್)

ಆ)

| | 1990-91 (ಡಿಸೆಂಬರ್ 90 ರಿಂದ ನವೆಂಬರ್ 91) | 1991-92 (ಡಿಸೆಂಬರ್ 91 ರಿಂದ ಒಂದು ತಿಂಗಳು ಮಾತ್ರ) |
|---|---|---|
| ರಾಜ್ಯದಲ್ಲಿ - | 3.30 | 0.41 |
| ಹೊರರಾಜ್ಯ - | 0.09 | – |
| ಹೊರದೇಶ - | 0.39 | 0.02 |

ಇ) ಹೌದು.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

## ಕರ್ನಾಟಕ ರಾಜ್ಯದಲ್ಲಿ ಇರುವ ಖೈದಿಗಳ ಸಂಖ್ಯೆ

369 (829) ಶ್ರೀ ಬಾಬುರಾವ್ ಚಿವಾಣ್ (ಪರಹಾಬಾದ್):- ಮಾನ್ಯ ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಇರುವ ಹೆಣ್ಣು ಮತ್ತ ಗಂಡು ಖೈದಿಗಳ ಸಂಖ್ಯೆ ಎಷ್ಟು?

ಆ) ಖೈದಿಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಲಾಗುತ್ತಿದೆಯೇ?

ಇ) ಈ ಬಗ್ಗೆ ಸರ್ಕಾರದ ಅಭಿಪ್ರಾಯಗಳೇನು?

ಈ) ಪ್ರತಿ ವರ್ಷ ಖೈದಿಗಳಿಗೆ ಬರತಕ್ಕಂತಹ ಒಟ್ಟು ಖರ್ಚು ಎಷ್ಟು?

ಶ್ರೀ ಡಿ.ಕೆ. ಶಿವಕುಮಾರ್ (ಬಂಧೀಖಾನೆ ಮತ್ತು ಗೃಹ ರಕ್ಷಕ ದಳ ರಾಜ್ಯ ಸಚಿವರು):-